CC

1999

GENERAL STUDIES

Paper 1

Time : 3 Hours] *[Maximum Marks : 300*

INSTRUCTIONS

Each question is printed both in English and in Kannada.

Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket.

Candidates should attempt questions from all Sections.

The number of marks carried by each question is indicated at the end of the question.

The length of the answers should not, as far as possible, exceed the specification given at the end of each question.

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

[Turn over

www.kpscvaani.com

SECTION A

1. Discuss the part played by Tilak in the Indian National Movement. *(About 250 words)* *35*

OR

Describe the circumstances responsible for the rise of the extremists and the revolutionary movement in Indian politics in the early years of the 20th century. Highlight the role of the revolutionaries of Karnataka.

2. Write short notes on any ***two*** of the following : *(About 150 words each)* *15× 2=30*

   (a) Dr S.V. Parameshwara Bhat, popularly known as *"Kannada Kalidasa"*

   (b) Benjamin Lewis Rice and the Karnataka education system

   (c) The main features of *Dravida* style of temple architecture

3. Write short notes on any ***three*** of the following : *(About 75 words each)* *10× 3=30*

   (a) The achievement of the Mysore Ruler in the 18th century who planted "The Tree of Liberty" at his capital and enrolled himself as a member of the Jacobian Club of France.

   (b) The famous Hoysaleshwara temple and the Chalukyan style of temple architecture.

   (c) The folk dances of Karnataka.

   (d) The Somnath temple.

4. What do you know about the following ? *(About 20 words each)* *2×15=30*

   (a) (i) Ali Akbar Khan

   (ii) Bismillah Khan

   (iii) Dagar brothers

   (iv) Bhimsen Joshi

   (v) Shyama Shastri

www.kpscvaani.com

ವಿಭಾಗ A

1. ತಿಲಕರು ಭಾರತದ ರಾಷ್ಟ್ರೀಯ ಆಂದೋಲನದಲ್ಲಿ ವಹಿಸಿದ ಪಾತ್ರದ ಬಗ್ಗೆ ಚರ್ಚಿಸಿರಿ.
(ಸುಮಾರು 250 ಶಬ್ದಗಳಲ್ಲಿ) 35

ಅಥವಾ

20ನೇ ಶತಮಾನದ ಪ್ರಾರಂಭದ ವರ್ಷಗಳಲ್ಲಿ ಭಾರತೀಯ ರಾಜಕಾರಣದಲ್ಲಿ ಉಗ್ರಗಾಮಿಗಳ ಹಾಗೂ ಕ್ರಾಂತಿಕಾರಿ ಆಂದೋಲನದ ಉದ್ಭವಕ್ಕೆ ಕಾರಣವಾದ ಸನ್ನಿವೇಶಗಳನ್ನು ವಿವರಿಸಿ. ಕರ್ನಾಟಕದ ಕ್ರಾಂತಿಕಾರಿಗಳ ಪಾತ್ರದ ಪ್ರಾಮುಖ್ಯತೆ ಏನು ಎಂಬುದನ್ನು ಒತ್ತಿ ತಿಳಿಸಿ.

2. ಯಾವುದಾದರೂ ***ಎರಡರ*** ಬಗ್ಗೆ ಲಘುಟಿಪ್ಪಣಿ ಬರೆಯಿರಿ :
(ಪ್ರತಿ ಉತ್ತರ ಸುಮಾರು 150 ಶಬ್ದಗಳಲ್ಲಿ) *15×2=30*

(a) *"ಕನ್ನಡದ ಕಾಳಿದಾಸ"* ಎಂದು ಪ್ರಸಿದ್ಧರಾದ ಡಾ. ಎಸ್.ವಿ. ಪರಮೇಶ್ವರ ಭಟ್.

(b) ಬೆಂಜಮಿನ್ ಲೂಯಿ ರೈಸ್ ಮತ್ತು ಕರ್ನಾಟಕದ ಶಿಕ್ಷಣ ವ್ಯವಸ್ಥೆ.

(c) ದೇವಾಲಯ ವಾಸ್ತುಶಿಲ್ಪದ ದ್ರಾವಿಡ ಶೈಲಿಯ ಮುಖ್ಯ ಲಕ್ಷಣಗಳು.

3. ಯಾವುದಾದರೂ ***ಮೂರರ*** ಬಗ್ಗೆ ಲಘುಟಿಪ್ಪಣಿ ಬರೆಯಿರಿ :
(ಪ್ರತಿ ಉತ್ತರ ಸುಮಾರು 75 ಶಬ್ದಗಳಲ್ಲಿ) *10×3=30*

(a) "ಸ್ವಾತಂತ್ರ್ಯದ ವೃಕ್ಷ"ವನ್ನು ತನ್ನ ರಾಜಧಾನಿಯಲ್ಲಿ ನೆಟ್ಟ ಹಾಗೂ ಫ್ರಾನ್ಸ್‌ನ ಜೆಕೋಬಿಯನ್ ಕ್ಲಬ್‌ನ ಸದಸ್ಯನಾಗಿ ಸೇರಿಕೊಂಡ 18 ನೆಯ ಶತಮಾನದ ಮೈಸೂರು ಅರಸನ ಸಾಧನೆ.

(b) ವಿಖ್ಯಾತ ಹೊಯ್ಸಳೇಶ್ವರ ದೇವಾಲಯ ಹಾಗೂ ಚಾಲುಕ್ಯ ಶೈಲಿಯ ದೇವಾಲಯದ ವಾಸ್ತುಶಿಲ್ಪ.

(c) ಕರ್ನಾಟಕದ ಜಾನಪದ ನೃತ್ಯಗಳು.

(d) ಸೋಮನಾಥ ದೇವಾಲಯ.

4. ಕೆಳಗೆ ತಿಳಿಸಿರುವ ಅಂಶಗಳ ಬಗ್ಗೆ ನಿಮಗೆಷ್ಟು ಗೊತ್ತಿದೆ ?
(ಪ್ರತಿ ಉತ್ತರ ಸುಮಾರು 20 ಶಬ್ದಗಳಲ್ಲಿ) *2×15=30*

(a) (i) ಅಲಿ ಅಕ್ಬರ್ ಖಾನ್

(ii) ಬಿಸ್ಮಿಲ್ಲಾ ಖಾನ್

(iii) ಡಾಗರ್ ಸಹೋದರರು

(iv) ಭೀಮಸೇನ್ ಜೋಷಿ

(v) ಶ್ಯಾಮ ಶಾಸ್ತ್ರಿ

[Turn over

www.kpscvaani.com

(b) (i) Rock cut temples of Karnataka

(ii) Gomateshwara at Sravanabelagola

(iii) Gol Gumbaz

(iv) Ajanta caves

(v) Khajuraho temples

(c) (i) Amarnath Yatra

(ii) Vastu Shastra

(iii) Indian Horoscope System

(iv) Kumbha Mela

(v) Chandragutti Jatra

www.kpscvaani.com

(b) (i) ಕರ್ನಾಟಕದ ಶಿಲಾಕೆತ್ತನೆಯ ದೇವಾಲಯಗಳು

(ii) ಶ್ರವಣಬೆಳಗೊಳದ ಗೋಮಟೇಶ್ವರ

(iii) ಗೋಲ್ ಗುಂಬಜ್

(iv) ಅಜಂತಾ ಗುಹೆಗಳು

(v) ಖಜುರಾಹೊ ದೇವಾಲಯಗಳು

(c) (i) ಅಮರನಾಥ ಯಾತ್ರೆ

(ii) ವಾಸ್ತು ಶಾಸ್ತ್ರ

(iii) ಭಾರತೀಯ ಜಾತಕ ಪದ್ಧತಿ

(iv) ಕುಂಭ ಮೇಳ

(v) ಚಂದ್ರಗುತ್ತಿ ಜಾತ್ರೆ

[Turn over

www.kpscvaani

SECTION B

5. 'The age of coalition governments has arrived in India. This, however, is a passing phase in our country as it matures in its democratic traditions.'

Comment on the above statement and give your assessment of the phenomenon and its repercussions on the growth and governance of the country. *(About 250 words)* *35*

OR

The nuclear tests by India and Pakistan have generated a totally new environment in the sub-continent. What are the implications of this in terms of India's future relations with its neighbours in particular, and other world powers and international organisations in general ? *(About 250 words)*

6. Describe any ***three*** of the following : *(About 75 words each)* *10× 3=30*

(a) Cauvery water dispute

(b) Mysore Palace take-over by Government

(c) John Glenn's recent adventure

(d) The great disappointment caused by Leonid meteor shower

(e) Exercise *Shiv Shakti* and its repercussions

(f) The Cubbon Park controversy

7. Write notes on any ***six*** of the following : *(About 50 words each)* *5× 6=30*

(a) Puthina

(b) Pete Sampras

(c) Sheila Dixit

(d) Veerappan

(e) Bill Gates

www.kpscvaani.com

ವಿಭಾಗ B

6. "ಭಾರತದಲ್ಲಿ ಸಮ್ಮಿಶ್ರ ಸರ್ಕಾರಗಳ ಯುಗವು ಆರಂಭವಾಗಿದೆ. ಆದರೆ ಇದು ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವದ ಪರಂಪರೆಗಳು ಪರಿಪಕ್ವತೆ ಹೊಂದುತ್ತಿರುವಾಗಿನ ಒಂದು ತಾತ್ಕಾಲಿಕ ಅವಸ್ಥೆಯಾಗಿರುತ್ತದೆ."

ಮೇಲಿನ ಹೇಳಿಕೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು ? ಹಾಗೂ ಈ ತಥ್ಯ ಮತ್ತು ನಮ್ಮ ದೇಶದ ಬೆಳವಣಿಗೆ ಹಾಗೂ ಆಳ್ವಿಕೆಯ ಮೇಲೆ ಅದರ ಘರ್ಷಣಾತ್ಮಕ ಪರಿಣಾಮಗಳ ಬಗ್ಗೆ ವ್ಯಾಖ್ಯಾನಿಸಿ. *(ಸುಮಾರು 250 ಶಬ್ದಗಳಲ್ಲಿ)* 35

ಅಥವಾ

ಭಾರತ ಹಾಗೂ ಪಾಕಿಸ್ತಾನಗಳು ನಡೆಸಿದ ಅಣ್ವಸ್ತ್ರ ಪರೀಕ್ಷೆಗಳಿಂದ ಉಪಖಂಡದಲ್ಲಿ ಸಂಪೂರ್ಣವಾಗಿ ಹೊಸ ಸನ್ನಿವೇಶ ನಿರ್ಮಾಣವಾಗಿದೆ. ಇದರಿಂದ ಮುಖ್ಯವಾಗಿ ತನ್ನ ನೆರೆ ರಾಷ್ಟ್ರಗಳ ಜೊತೆಗೆ, ಹಾಗೂ ಸಾಮಾನ್ಯವಾಗಿ ವಿಶ್ವದ ಇತರ ಶಕ್ತಿಯುತ ರಾಷ್ಟ್ರಗಳು ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ, ಭಾರತದ ಭವಿಷ್ಯದ ಸಂಬಂಧಗಳ ಮೇಲೆ ಯಾವ ಪರಿಣಾಮ ಉಂಟಾಗಬಹುದು ? *(ಸುಮಾರು 250 ಶಬ್ದಗಳಲ್ಲಿ)*

8. ಕೆಳಗಿನ ಯಾವುದಾದರೂ ಮೂರನ್ನು ವಿವರಿಸಿ : *(ಪ್ರತಿ ಉತ್ತರ ಸುಮಾರು 75 ಶಬ್ದಗಳಲ್ಲಿ)* *10×3=30*

(a) ಕಾವೇರಿ ಜಲ ವಿವಾದ

(b) ಸರ್ಕಾರದಿಂದ ಮೈಸೂರು ಅರಮನೆಯ ಸ್ವಾಧೀನತೆ

(c) ಜಾನ್ ಗ್ಲೆನ್ ಅವರ ಇತ್ತೀಚಿನ ಸಾಹಸ

(d) ಲಿಯಾನಿಡ್ ಉಲ್ಕಾಪಾತ ಧಾರೆಯಿಂದ ಆದ ಆಶಾಭಂಗ

(e) ಶಿವಶಕ್ತಿ ರಕ್ಷಣಾ ಅಭ್ಯಾಸ ಹಾಗೂ ಇದರ ಪ್ರತಿಘಾತಗಳು

(f) ಕಬ್ಬನ್ ಪಾರ್ಕ್ ವಿವಾದ

7. ಯಾವುದಾದರೂ ಆರರ ಮೇಲೆ ಟಿಪ್ಪಣಿ ಬರೆಯಿರಿ :

(ಪ್ರತಿ ಉತ್ತರ ಸುಮಾರು 50 ಶಬ್ದಗಳಲ್ಲಿ) *5×6=30*

(a) ಪುತಿನ

(b) ಪೀಟ್ ಸಾಂಪ್ರಾಸ್

(c) ಶೀಲಾ ದೀಕ್ಷಿತ್

(d) ವೀರಪ್ಪನ್

(e) ಬಿಲ್ ಗೇಟ್ಸ್

[Turn over

www.kpscvaani.com

(f) Girish Kasaravalli

(g) Rajat Sharma

(h) General V.P. Malik

(i) Monica Lewinsky

(j) Mahesh Bhupathi

(k) Amartya Sen

(l) Jyothirmoy Sikdar

8. Briefly explain any ***six*** of the following : *(About 50 words each)* *5×6=30*

(a) Use of cellular phones in India

(b) Internet and E-mail

(c) Pentium Processor

(d) INSAT series of satellites

(e) The *Matiz* car

(f) The inter-nation space station

(g) Global warming

(h) Web site

(i) Modem

(j) Terminator gene

www.kpscvaani.com

(f) ಗಿರೀಶ್ ಕಾಸರವಳ್ಳಿ

(g) ರಜತ್ ಶರ್ಮ

(h) ಜನರಲ್ ವಿ.ಪಿ. ಮಲಿಕ್

(i) ಮೊನಿಕಾ ಲ್ಯುವಿನ್‌ಸ್ಕಿ

(j) ಮಹೇಶ್ ಭೂಪತಿ

(k) ಅಮರ್ತ್ಯ ಸೆನ್

(l) ಜ್ಯೋತಿರ್ಮಯ್ ಸಿಕ್ದರ್

8. ಯಾವುದಾದರೂ *ಆರರ* ಮೇಲೆ ಟಿಪ್ಪಣಿ ಬರೆಯಿರಿ :
(ಪ್ರತಿ ಉತ್ತರ ಸುಮಾರು 50 ಶಬ್ದಗಳಲ್ಲಿ) *5×6=30*

(a) ಭಾರತದಲ್ಲಿ ಸೆಲ್ಯುಲರ್ ಫೋನ್‌ಗಳ ಬಳಕೆ

(b) ಇಂಟರ್‌ನೆಟ್ ಹಾಗೂ ಇ-ಮೇಲ್

(c) ಪೆಂಟಿಯಮ್ ಪ್ರಾಸೆಸರ್

(d) ಇನ್ಸಾಟ್ ಸರಣಿಯ ಉಪಗ್ರಹಗಳು

(e) ಮಾಟಿಜ್ ಕಾರು

(f) ಅಂತರ ರಾಷ್ಟ್ರ ಬಾಹ್ಯಾಕಾಶ ನಿಲ್ದಾಣ

(g) ಭೂಮಂಡಲದ ಕಾವೇರಿಕೆ

(h) ವೆಬ್ ಸೈಟ್

(i) ಮಾಡೆಮ್

(j) ಟರ್ಮಿನೇಟರ್ ಜೀನ್

[Turn over

www.kpscvaani.com

SECTION C

9. Three tests were conducted for five students during the year. The class teacher calculated the averages of the marks obtained and showed them to the Principal as assessment of performance. The marks were as under :

Student	Test I	Test II	Test III	Average
A	55	60	65	60
B	65	60	55	60
C	40	40	70	50
D	80	40	30	50
E	55	56	55	55

The teacher told the Principal that A was GOOD, B was GOOD, C was POOR, D was POOR and E was FAIR.

Give your assessment in your own words describing the performance of each student and your recommendation to the Principal. *12*

10. (a) Offer your views on the possible reasons for the difference in patterns of behaviour of the SENSEX and the price of the shares as reflected in the chart below : *8*

SENSEX	2876	2917	2989	3058	3365	3570	3366	2963	2888
PRICE OF SHARE A	191	197	205	230	235	240	234	200	192
PRICE OF SHARE B	150	150	157	155	149	147	150	160	167

www.kpscvaani.com

ವಿಭಾಗ C

9. ಒಂದು ವರ್ಷದಲ್ಲಿ ಐದು ವಿದ್ಯಾರ್ಥಿಗಳಿಗೆ ಮೂರು ಪರೀಕ್ಷೆಗಳನ್ನು ನಡೆಸಲಾಯಿತು. ಗಳಿಸಿದ ಅಂಕಗಳ ಸರಾಸರಿಯನ್ನು ಲೆಕ್ಕಾಚಾರ ಮಾಡಿ ತರಗತಿಯ ಅಧ್ಯಾಪಕರು ಪ್ರಾಂಶುಪಾಲರಿಗೆ ಇದು ವಿದ್ಯಾರ್ಥಿಗಳ ಮೌಲ್ಯಮಾಪನ ಎಂದು ತೋರಿಸಿದರು. ಅಂಕಗಳು ಈ ಕೆಳಕಂಡಂತೆ ಇದ್ದವು :

ವಿದ್ಯಾರ್ಥಿ	ಪರೀಕ್ಷೆ I	ಪರೀಕ್ಷೆ II	ಪರೀಕ್ಷೆ III	ಸರಾಸರಿ
A	55	60	65	60
B	65	60	55	60
C	40	40	70	50
D	80	40	30	50
E	55	56	55	55

ಅಧ್ಯಾಪಕರು ಪ್ರಾಂಶುಪಾಲರಿಗೆ A ವಿದ್ಯಾರ್ಥಿಯ ಸಾಧನೆ ಒಳ್ಳೆಯದು (GOOD), B ನ ಸಾಧನೆ ಒಳ್ಳೆಯದು (GOOD), C ನ ಸಾಧನೆ ಕಳಪೆ (POOR), D ನ ಸಾಧನೆ ಕಳಪೆ (POOR), ಹಾಗೂ E ನ ಸಾಧನೆ ಸಾಧಾರಣ (FAIR) ಎಂದು ತಿಳಿಸಿದರು.

ನಿಮ್ಮ ಸ್ವಂತ ಶಬ್ದಗಳಲ್ಲಿ ಪ್ರತಿ ವಿದ್ಯಾರ್ಥಿಯ ಸಾಧನೆಯ ಮೌಲ್ಯಮಾಪನೆ ಮಾಡುತ್ತಾ ಪ್ರಾಂಶುಪಾಲರಿಗೆ ನಿಮ್ಮ ಶಿಫಾರಸ್ಸನ್ನು ಮಂಡಿಸಿರಿ. *12*

10. (a) ಈ ಕೆಳಕಂಡ ತಖ್ತೆಯಲ್ಲಿ ಪ್ರತಿಬಿಂಬಿಸಿರುವ ಸೆನ್ಸೆಕ್ಸ್‌ನ ವರ್ತನೆಯಲ್ಲಿನ ಭಿನ್ನತೆಗಳನ್ನು ಹಾಗೂ ಷೇರುಗಳ ಬೆಲೆಗಳ ವ್ಯತ್ಯಾಸಕ್ಕೆ ಸಂಭವನೀಯ ಕಾರಣಗಳನ್ನು ಕುರಿತು ನಿಮ್ಮ ಅಭಿಪ್ರಾಯ ತಿಳಿಸಿ : *8*

ಸೆನ್ಸೆಕ್ಸ್	2876	2917	2989	3058	3365	3570	3366	2963	2888
A ಷೇರಿನ ಬೆಲೆ	191	197	205	230	235	240	234	200	192
B ಷೇರಿನ ಬೆಲೆ	150	150	157	155	149	147	150	160	167

www.kpscvaani.com

(b) Marks obtained by students in Mathematics are given below in terms of marks and frequency :

Marks Obtained	Frequency
30 – 35	5
35 – 40	10
40 – 45	15
45 – 50	30
50 – 55	5
55 – 60	5

Complete the "More than" table given below : *4*

Marks Obtained	No. of Students
More than 30 (including 30)	
More than 35 (including 35)	
More than 40 (including 40)	
More than 50 (including 50)	
More than 60 (including 60)	

11. (a) Explain any ***three*** of the following : *(About 20 words each)* *2× 3=6*

(i) Population Density

(ii) G.N.P.

(iii) Census

(iv) Wholesale Price Index

(v) Forecast of monsoons

(b) Sachin Tendulkar scored 116 in one of the matches played at Sharjah. The diagram shown below was flashed on the T.V. screen :



T = Tendulkar

B = Bowler

What initial conjectures can be made on the above figures ? What additional data would you like to have to form firmer opinions ? *7*

www.kpscvaani.com

(b) ಗಣಿತದಲ್ಲಿ ವಿದ್ಯಾರ್ಥಿಗಳು ಪಡೆದಿರುವ ಅಂಕಗಳನ್ನು, ಅಂಕಗಳು ಹಾಗೂ ಅವುಗಳ ಪುನರಾವರ್ತನೆ ಆಧಾರದ ಮೇಲೆ, ಈ ಕೆಳಕಂಡಂತೆ ನೀಡಲಾಗಿದೆ :

ಗಳಿಸಿದ ಅಂಕಗಳು	ಪುನರಾವರ್ತನೆ
30 – 35	5
35 – 40	10
40 – 45	15
45 – 50	30
50 – 55	5
55 – 60	5

ಈ ಕೆಳಕಂಡ "– ಕ್ಕಿಂತ ಹೆಚ್ಚು" ತಖ್ತೆಯನ್ನು ಪೂರ್ಣಗೊಳಿಸಿ : 4

ಗಳಿಸಿದ ಅಂಕಗಳು	ವಿದ್ಯಾರ್ಥಿಗಳ ಸಂಖ್ಯೆ
30 ಕ್ಕಿಂತ ಹೆಚ್ಚು (30 ಸೇರಿದಂತೆ)	
35 ಕ್ಕಿಂತ ಹೆಚ್ಚು (35 ಸೇರಿದಂತೆ)	
40 ಕ್ಕಿಂತ ಹೆಚ್ಚು (40 ಸೇರಿದಂತೆ)	
50 ಕ್ಕಿಂತ ಹೆಚ್ಚು (50 ಸೇರಿದಂತೆ)	
60 ಕ್ಕಿಂತ ಹೆಚ್ಚು (60 ಸೇರಿದಂತೆ)	

11. (a) ಯಾವುದಾದರೂ ಮೂರನ್ನು ವಿವರಿಸಿರಿ : *(ಪ್ರತಿ ಉತ್ತರ ಸುಮಾರು 20 ಶಬ್ದಗಳಲ್ಲಿ)* 2×3=6

(i) ಜನಸಂಖ್ಯಾ ಸಾಂದ್ರತೆ

(ii) ಜಿ. ಎನ್. ಪಿ.

(iii) ಜನಗಣತಿ

(iv) ಸಗಟು ಬೆಲೆ ಸೂಚಿಕೆ (Wholesale Price Index)

(v) ಮುಂಗಾರಿನ ಅಂದಾಜು

(b) ಶಾರ್ಜಾದಲ್ಲಿ ಆಡಿದ ಪಂದ್ಯವೊಂದರಲ್ಲಿ ಸಚಿನ್ ತೆಂಡುಲ್ಕರ್ 116 ರನ್‌ಗಳನ್ನು ಗಳಿಸಿದರು. ಈ ಕೆಳಕಂಡ ನಕ್ಷೆಯನ್ನು ದೂರದರ್ಶನದ ಪರದೆಯ ಮೇಲೆ ಕಾಣಿಸಲಾಯಿತು.



T = ತೆಂಡುಲ್ಕರ್

B = ಬೌಲರ್

ಮೇಲ್ಕಂಡ ನಕ್ಷೆಯಿಂದ ಯಾವ ಪ್ರಾಥಮಿಕ ಊಹೆಗಳನ್ನು ಮಾಡಬಹುದು ? ದೃಢವಾದ ಅಭಿಪ್ರಾಯವನ್ನು ಮೂಡಿಸಲು ಇನ್ನೂ ಯಾವ ಹೆಚ್ಚುವರಿ ದತ್ತಾಂಶದ ಅಗತ್ಯವಿದೆ ? 7

[Turn over

www.kpscvaani.com

12. (a) (i) Make a frequency table of the number of words with different numbers of letters in the sentences given below : *3*

THE POKHARAN NUCLEAR EXPLOSIONS HAD A TREMENDOUS EFFECT ON THE NATIONAL ECONOMY. A NUMBER OF SANCTIONS IMPOSED BY AMERICA DID LEAD TO A NUMBER OF PROBLEMS.

(ii) The number of people who have climbed Mount Everest as a cumulative figure each year after 1953 (Prior to this, the cumulative total was zero as none had climbed the Everest.) has shown a pattern as shown in the graph below :



A famous doctor has attributed this to the overall fitness of youth all over the world after the year 1953. Offer your views on the verdict of the doctor and your views on the graphical trend noted above. *4*

(b) (i) Find the total number of arrangements of the letters of the word ALLAHABAD.

(ii) In a single throw of a uniform dice, find the probability of getting a sum of 5.

(iii) Two cards are drawn from a pack of cards. What is the probability that both are black ?

(iv) There are five women and five men. What is the total number of ways in which marriages can take place between them ? *6*

www.kpscvaani.com

12. (a) (i) ಈ ಕೆಳಕಂಡ ಇಂಗ್ಲೀಷ್ ವಾಕ್ಯಗಳಿಂದ ವಿವಿಧ ಅಕ್ಷರಗಳ ಸಂಖ್ಯೆಯುಳ್ಳ ಶಬ್ದಗಳ ಸಂಖ್ಯೆಗಳ ಅವರ್ತವಿನ್ಯಾಸದ ತಖ್ತೆಯನ್ನು ತಯಾರಿಸಿರಿ : 3

THE POKHARAN NUCLEAR EXPLOSIONS HAD A TREMENDOUS EFFECT ON THE NATIONAL ECONOMY. A NUMBER OF SANCTIONS IMPOSED BY AMERICA DID LEAD TO A NUMBER OF PROBLEMS.

(ii) 1953 ರ ನಂತರದಿಂದ ಎವರೆಸ್ಟ್ ಪರ್ವತವನ್ನು ಹತ್ತಿರುವ ವ್ಯಕ್ತಿಗಳ ಪ್ರತಿ ವರ್ಷದ ಸಂಚಿತ ಸಂಖ್ಯೆಯು, (1953 ಕ್ಕಿಂತ ಮೊದಲಿನ ಸಂಚಿತ ಅಂಕಿ ಅಂಶವು ಶೂನ್ಯವಾಗಿರುತ್ತದೆ, ಏಕೆಂದರೆ ಅದಕ್ಕಿಂತ ಮೊದಲು ಯಾರೂ ಎವರೆಸ್ಟ್ ಪರ್ವತವನ್ನು ಹತ್ತಿರಲಿಲ್ಲ.) ಕೆಳಕಂಡ ರೇಖಾನಕ್ಷೆಯಲ್ಲಿ ತೋರಿಸಿದಂತಹ ವಿನ್ಯಾಸವನ್ನು ರೂಪಿಸಿದೆ :



ವಿಖ್ಯಾತ ವೈದ್ಯರೊಬ್ಬರು ಈ ಮೇಲಿನ ಅಂಶಕ್ಕೆ, 1953 ನಂತರ ವಿಶ್ವದ ಎಲ್ಲೆಡೆ ಯುವಜನರು ಒಟ್ಟಾರೆ ಒಳ್ಳೆಯ ಆರೋಗ್ಯ ಸ್ಥಿತಿ ಹೊಂದಿದ್ದುದೇ ಕಾರಣ ಎಂದು ಅಭಿಪ್ರಾಯಪಟ್ಟಿದ್ದಾರೆ. ವೈದ್ಯರ ಈ ಅಭಿಪ್ರಾಯದ ಬಗ್ಗೆ ಹಾಗೂ ಮೇಲಿನ ರೇಖಾನಕ್ಷೆಯಲ್ಲಿ ಕಂಡುಬರುತ್ತಿರುವ ಪ್ರವೃತ್ತಿಯ ಬಗ್ಗೆ ನಿಮ್ಮ ಅವಲೋಕನವನ್ನು ತಿಳಿಸಿ. 4

(b) (i) "ALLAHABAD" ಎಂಬ ಪದದಲ್ಲಿರುವ ಅಕ್ಷರಗಳಿಂದ ಒಟ್ಟು ಎಷ್ಟೆಷ್ಟು ರೀತಿಯ ಮರುಜೋಡಣೆಗಳು ಸಾಧ್ಯ ? ತಿಳಿಸಿ.

(ii) ಒಂದೇ ನಮೂನೆಯ ಪಗಡೆಯ ಒಂದು ಎಸೆತದಲ್ಲಿ 5 ರ ಮೊತ್ತ ಲಭಿಸುವ ಸಂಭವನೀಯತೆಯನ್ನು ಕಂಡುಹಿಡಿಯಿರಿ.

(iii) ಇಸ್ಪೀಟು ಎಲೆಯ ಕಟ್ಟಿನಿಂದ ಎರಡು ಎಲೆಗಳನ್ನು ಎಳೆಯಲಾಯಿತು. ಈ ಎರಡು ಎಲೆಗಳೂ ಕಪ್ಪು ಬಣ್ಣದ್ದಾಗಿರುವ ಸಂಭವನೀಯತೆ ಎಷ್ಟಾಗಿರುತ್ತದೆ ?

(iv) ಒಟ್ಟು ಐದು ಸ್ತ್ರೀಯರು ಹಾಗೂ ಐದು ಪುರುಷರು ಇದ್ದಾರೆ. ಇವರ ಮಧ್ಯೆ ವಿವಾಹವಾಗುವ ಒಟ್ಟು ವಿಧಾನಗಳ ಸಂಖ್ಯೆ ಎಷ್ಟು ? 6

www.kpscvaani.com

DD

1999

GENERAL STUDIES

Paper 2

Time : 3 Hours] *[Maximum Marks : 300*

INSTRUCTIONS

Each question is printed both in English and in Kannada.

Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket.

Candidates should attempt questions from all Sections.

The number of marks carried by each question is indicated at the end of the question.

The length of the answers should not, as far as possible, exceed the specification given at the end of each question.

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

[Turn over

www.kpscvaani.com

SECTION A

1. Discuss the constitutional position of the civil services in India, indicating how their impartiality and independence are ensured. Trace the growth of civil services in Karnataka. *(About 250 words)* 40

OR

"The decision of the present government on the formation of three smaller states by bifurcating three bigger states is like opening a Pandora's Box with long-term and short-term implications."

While giving your comments on this, write a note on the present situation in Karnataka as regards border disputes and demands for separate statehood.

2. "Karnataka is the land of silk, sandal, coffee and gold." — Justify the statement with facts. *(About 250 words)* 40

OR

What measures has the Government of India taken to attract foreign investment as part of a new strategy of industrial development in India ? What is the present industrial scene in Karnataka ?

3. Nuclear power stations present a distinct means of overcoming the power shortage in India. What is the present status of nuclear power generation in India and the pros and cons for future growth ? *(About 250 words)* 40

OR

Bangalore has found a place among the top few cities in the world in the field of electronics. Elaborate on the achievements that have led to this honour and the contributing factors that have helped.

www.kpscvaani.com

ವಿಭಾಗ A

1. ಭಾರತದಲ್ಲಿ ನಾಗರೀಕ (ಸಿವಿಲ್) ಸೇವೆಗಳ ಸಂವಿಧಾನಾತ್ಮಕ ಸ್ಥಾನವನ್ನು ಚರ್ಚಿಸುತ್ತಾ, ಈ ಸೇವೆಗಳ ನಿಷ್ಪಕ್ಷಪಾತತೆ ಹಾಗೂ ಸ್ವತಂತ್ರತೆಗಳನ್ನು ಯಾವ ರೀತಿ ಖಚಿತಪಡಿಸಲಾಗಿದೆ ಎಂಬುದನ್ನು ತಿಳಿಸಿ. ಕರ್ನಾಟಕದಲ್ಲಿ ಈ ಸೇವೆಗಳು ಬೆಳೆದು ಬಂದ ದಾರಿಯನ್ನು ಕುರಿತು ಬರೆಯಿರಿ.

(ಸುಮಾರು 250 ಶಬ್ದಗಳಲ್ಲಿ) 40

ಅಥವಾ

"ಮೂರು ದೊಡ್ಡ ರಾಜ್ಯಗಳನ್ನು ವಿಂಗಡಿಸಿ, ಮೂರು ಸಣ್ಣ ರಾಜ್ಯಗಳನ್ನು ನಿರ್ಮಾಣ ಮಾಡುವ ಪ್ರಸ್ತುತ ಸರ್ಕಾರದ ನಿರ್ಧಾರವು ಒಂದು ಕಷ್ಟಗಳ ಪರಂಪರೆಯನ್ನೇ ಆರಂಭಿಸಿದಂತೆ ಆಗಿದೆ (ಪಾಂಡೊರಾ ಡಬ್ಬಿಯನ್ನು ತೆರೆದಂತೆ). ಇದರಿಂದ ದೀರ್ಘಾವಧಿ ಹಾಗೂ ಅಲ್ಪಾವಧಿ ತೊಡಕುಗಳೆಲ್ಲವೂ ಇವೆ."

ಇದರ ಬಗ್ಗೆ ನಿಮ್ಮ ಟೀಕೆಯನ್ನು ನೀಡುತ್ತಾ, ಕರ್ನಾಟಕದಲ್ಲಿ ಪ್ರಸ್ತುತವಾಗಿ ಚಾಲ್ತಿಯಲ್ಲಿರುವ ಗಡಿವಿವಾದಗಳ ಹಾಗೂ ಪ್ರತ್ಯೇಕ ರಾಜ್ಯ ಬೇಡಿಕೆಯ ಬಗ್ಗೆ ಟಿಪ್ಪಣಿ ನೀಡಿರಿ.

2. "ಕರ್ನಾಟಕವು ರೇಷ್ಮೆ, ಶ್ರೀಗಂಧ, ಕಾಫಿ ಹಾಗೂ ಚಿನ್ನದ ನಾಡು." – ಈ ಹೇಳಿಕೆಯನ್ನು ಐತಿಹಾಸಿಕ ಅಂಶಗಳೊಂದಿಗೆ ರುಜುವಾತು ಮಾಡಿರಿ. *(ಸುಮಾರು 250 ಶಬ್ದಗಳಲ್ಲಿ)* 40

ಅಥವಾ

ಭಾರತ ಸರ್ಕಾರವು ತನ್ನ ಕೈಗಾರಿಕಾ ಅಭಿವೃದ್ಧಿಯ ನೂತನ ಕೌಶಲ್ಯದ ಭಾಗವಾಗಿ ವಿದೇಶಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಯಾವ ಕ್ರಮಗಳನ್ನು ತೆಗೆದುಕೊಂಡಿದೆ ? ಕರ್ನಾಟಕದಲ್ಲಿನ ಕೈಗಾರಿಕಾ ಸನ್ನಿವೇಶದ ಪ್ರಸ್ತುತ ಸ್ಥಿತಿ ಹೇಗಿದೆ ?

3. ಅಣುಶಕ್ತಿ ಸ್ಥಾವರಗಳು ಭಾರತದಲ್ಲಿನ ವಿದ್ಯುಚ್ಛಕ್ತಿ ಕೊರತೆಯನ್ನು ಸ್ಪಷ್ಟವಾಗಿ ನೀಗಿಸುವಂಥ ಒಂದು ಸಾಧನವಾಗಿರುತ್ತದೆ. ಭಾರತದಲ್ಲಿ ಅಣುಶಕ್ತಿ ಉತ್ಪಾದನೆಯ ಪ್ರಸ್ತುತ ಸ್ಥಿತಿಗತಿಯನ್ನು ತಿಳಿಸುತ್ತಾ, ಇದರಿಂದ ಭವಿಷ್ಯದ ಬೆಳವಣಿಗೆಯ ಮೇಲಿನ ಸಾಧಕ ಬಾಧಕಗಳನ್ನು ತಿಳಿಸಿರಿ.

(ಸುಮಾರು 250 ಶಬ್ದಗಳಲ್ಲಿ) 40

ಅಥವಾ

ಭಾರತದಲ್ಲಿನ ಕೆಲವೇ ಅಗ್ರ ನಗರಗಳ ಪೈಕಿ ಬೆಂಗಳೂರು ಇಲೆಕ್ಟ್ರಾನಿಕ್ಸ್ ಕ್ಷೇತ್ರದಲ್ಲಿ ಉನ್ನತ ಸ್ಥಾನವನ್ನು ಹೊಂದಿದೆ. ಇಂತಹ ಗೌರವ ಪ್ರಾಪ್ತವಾಗುವಲ್ಲಿ ಕಾರಣವಾದ ಸಾಧನೆಗಳು ಹಾಗೂ ಅವುಗಳಿಗೆ ಸಂಬಂಧಪಟ್ಟಂತೆ ಅಂಶಗಳನ್ನು ವಿವರಿಸಿರಿ.

www.kpscvaani.com

SECTION B

4. Answer any ***two*** of the following : *(About 150 words each)* *20×2=40*

(a) Does calling for or holding a *bandh* by political parties tantamount to violation of the Fundamental Rights of individuals protected under Articles 19 and 21 of the Constitution ? Comment.

(b) Explain the role of Third World countries in the promotion of the New International Economic Order (NIEO).

(c) Write a note on the Rs. 1000 crore water resources plan evolved by the state of Karnataka.

(d) Can the President act independently of the advice of the Council of Ministers ? Elucidate.

5. Answer any ***two*** of the following : *(About 150 words each)* *20×2=40*

(a) How far has the Green Revolution been responsible for socio-economic changes in rural Karnataka ?

(b) Explain the factors of industrial location with special reference to Karnataka.

(c) What were the objectives of the public sector enterprises in India ? To what extent have they been met during the last two decades ?

(d) Discuss the role of infrastructure in the country's economic development.

6. Answer any ***three*** of the following : *(About 75 words each)* *10×3=30*

(a) What does the term 'Monsoon' imply ? Discuss the main characteristics of the summer rainfall and its significance in the agricultural economy of the country.

www.kpscvaani.com

ವಿಭಾಗ B

4. ಯಾವುದಾದರೂ ಎರಡನ್ನು ಉತ್ತರಿಸಿರಿ *(ಪ್ರತಿ ಉತ್ತರ ಸುಮಾರು 150 ಶಬ್ದಗಳಲ್ಲಿ)* : *20×2=40*

(a) ರಾಜಕೀಯ ಪಕ್ಷಗಳು 'ಬಂದ್' ಆಚರಿಸುವುದು ಅಥವಾ ಅದಕ್ಕಾಗಿ ಕರೆ ನೀಡುವ ಕ್ರಮವು ಸಂವಿಧಾನದ ಅನುಚ್ಛೇದ 19 ಮತ್ತು 21 ಅಡಿಯಲ್ಲಿ ವ್ಯಕ್ತಿಗೆ ನೀಡಲಾಗಿರುವಂಥ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಿದಂತಾಗುವುದೆ ? ಟೀಕಿಸಿರಿ.

(b) ನೂತನ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆ (NIEO) ಯನ್ನು ಪ್ರವರ್ಧಿಸುವಲ್ಲಿ ತೃತೀಯ ವಿಶ್ವ ರಾಷ್ಟ್ರಗಳ ಪಾತ್ರವನ್ನು ವಿವರಿಸಿರಿ.

(c) ಕರ್ನಾಟಕ ರಾಜ್ಯವು ರೂಪಿಸಿದ 1000 ಕೋಟಿ ರೂಪಾಯಿಯ ಜಲ - ಸಂಪನ್ಮೂಲ ಯೋಜನೆಯ ಬಗ್ಗೆ ಟಿಪ್ಪಣಿ ಬರೆಯಿರಿ.

(d) ಸಚಿವ ಸಂಪುಟದ ಸಲಹೆಯನ್ನು ಮೀರಿ ರಾಷ್ಟ್ರಪತಿಯು ಸ್ವತಂತ್ರವಾಗಿ ಕಾರ್ಯನಿರ್ವಹಣೆ ಮಾಡಬಹುದೇ ? ವಿವರಿಸಿರಿ.

5. ಯಾವುದಾದರೂ ಎರಡನ್ನು ಉತ್ತರಿಸಿರಿ *(ಪ್ರತಿ ಉತ್ತರ ಸುಮಾರು 150 ಶಬ್ದಗಳಲ್ಲಿ)* : *20×2=40*

(a) ಗ್ರಾಮೀಣ ಕರ್ನಾಟಕದಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗಳನ್ನು ತರುವಲ್ಲಿ ಹಸಿರು ಕ್ರಾಂತಿ ಎಷ್ಟರ ಮಟ್ಟಿಗೆ ಕಾರಣಕರ್ತವಾಗಿರುತ್ತದೆ ?

(b) ಕರ್ನಾಟಕವನ್ನು ವಿಶೇಷ ಗಮನದಲ್ಲಿಟ್ಟುಕೊಂಡು, ಕೈಗಾರಿಕಾ ಸ್ಥಳ ನೇಮಿಸುವ ಆಧಾರಗಳನ್ನು ವಿವರಿಸಿರಿ.

(c) ಭಾರತದಲ್ಲಿ ಸಾರ್ವಜನಿಕ ವಲಯದ ಉದ್ಯಮಗಳ ಮೂಲ ಉದ್ದೇಶಗಳು ಯಾವುವಾಗಿದ್ದವು ? ಕಳೆದ ಎರಡು ದಶಕಗಳಲ್ಲಿ ಈ ಉದ್ದೇಶಗಳು ಎಷ್ಟರ ಮಟ್ಟಿಗೆ ಈಡೇರಿವೆ ?

(d) ರಾಷ್ಟ್ರದ ಆರ್ಥಿಕ ವ್ಯವಸ್ಥೆಯಲ್ಲಿ ಮೂಲಭೂತ ರಚನಾವ್ಯವಸ್ಥೆಯ (ಇನ್ಫ್ರಾಸ್ಟ್ರಕ್ಚರ್) ಪಾತ್ರವನ್ನು ಚರ್ಚಿಸಿರಿ.

6. ಯಾವುದಾದರೂ ಮೂರನ್ನು ಉತ್ತರಿಸಿರಿ *(ಪ್ರತಿ ಉತ್ತರ ಸುಮಾರು 75 ಶಬ್ದಗಳಲ್ಲಿ)* : *10×3=30*

(a) ಮುಂಗಾರು ಎಂಬ ಪದದ ಅರ್ಥವು ಏನನ್ನು ಧ್ವನಿಸುತ್ತದೆ ? ಬೇಸಿಗೆಯ ಮಳೆಯ ಮುಖ್ಯ ಲಕ್ಷಣಗಳನ್ನು ಚರ್ಚಿಸುತ್ತಾ, ರಾಷ್ಟ್ರದ ಕೃಷಿ ಅರ್ಥವ್ಯವಸ್ಥೆಯ ಮೇಲೆ ಇದರ ಮಹತ್ವವನ್ನು ತಿಳಿಸಿರಿ.

(Turn over

www.kpscvaani.com

(b) Describe the distribution and production of Iron ore or Manganese in the country.

(c) How has the topography of Karnataka state become helpful for the development of hydro power projects ?

(d) The construction of Konkan Railway will be a boon for Karnataka. Why and how ?

7. Answer any ***two*** of the following : *(About 100 words each)* *20×2=40*

(a) India's progress in the development of satellites has been noteworthy. Describe India's status in the field.

(b) The recent developments in the car industry are a clear indication of high technology absorption by India from different parts of the world. Give your comments on the phenomenon.

(c) Doordarshan has played a major role in the spread of information to millions in the country. Elaborate on the role of this medium.

(d) Comment on the potential role of computers in the development of the country.

www.kpscvaani.com

(b) ದೇಶದಲ್ಲಿ ಕಬ್ಬಿಣದ ಅಥವಾ ಮ್ಯಾಂಗನೀಸ್ ಅದಿರಿನ ವಿತರಣೆ ಹಾಗೂ ಉತ್ಪಾದನೆಯನ್ನು ವಿವರಿಸಿರಿ.

(c) ಕರ್ನಾಟಕದ ಜಲವಿದ್ಯುತ್ ಯೋಜನೆಗಳ ಅಭಿವೃದ್ಧಿಗೆ ಇಲ್ಲಿನ ಮೇಲ್ಮೈ ಲಕ್ಷಣವು (ಟೋಪೊಗ್ರಫಿ) ಹೇಗೆ ಸಹಾಯಕಾರಿಯಾಗಿರುತ್ತದೆ ?

(d) ಕೊಂಕಣ ರೈಲು ವ್ಯವಸ್ಥೆಯ ನಿರ್ಮಾಣವು ಕರ್ನಾಟಕ ರಾಜ್ಯಕ್ಕೆ ವರದಾನವಾಗುವುದು. ಏಕೆ ಮತ್ತು ಹೇಗೆ ?

7. ಯಾವುದಾದರೂ **ಎರಡನ್ನು** ಉತ್ತರಿಸಿರಿ *(ಪ್ರತಿ ಉತ್ತರ ಸುಮಾರು 100 ಶಬ್ದಗಳಲ್ಲಿ)* : *20×2=40*

(a) ಉಪಗ್ರಹಗಳ ಅಭಿವೃದ್ಧಿಯಲ್ಲಿ ಭಾರತದ ಪ್ರಗತಿಯು ಗಮನಾರ್ಹವಾಗಿದೆ. ಈ ಕ್ಷೇತ್ರದಲ್ಲಿ ಭಾರತದ ಸ್ಥಾನವನ್ನು ವಿವರಿಸಿರಿ.

(b) ಕಾರು ಉದ್ಯಮದಲ್ಲಿನ ಇತ್ತೀಚಿನ ಬೆಳವಣಿಗೆಯು, ವಿಶ್ವದ ವಿವಿಧ ಭಾಗಗಳಿಂದ ಭಾರತವು ಉನ್ನತ ತಂತ್ರಜ್ಞಾನವನ್ನು ಹೀರಿಕೊಳ್ಳುವ ಸಾಮರ್ಥ್ಯದ ಪ್ರತೀಕವಾಗಿರುತ್ತದೆ. ಈ ವಿದ್ಯಮಾನದ ಬಗ್ಗೆ ನಿಮ್ಮ ಅಭಿಪ್ರಾಯವನ್ನು ನೀಡಿರಿ.

(c) ದೇಶದಲ್ಲಿ ಮಾಹಿತಿಯನ್ನು ಲಕ್ಷಾಂತರ ಜನರಿಗೆ ವ್ಯಾಪಕವಾಗಿ ತಲುಪಿಸುವಲ್ಲಿ ದೂರದರ್ಶನವು ಪ್ರಮುಖ ಪಾತ್ರ ವಹಿಸಿದೆ. ಈ ಮಾಧ್ಯಮದ ಪಾತ್ರವನ್ನು ವಿವರಿಸಿರಿ.

(d) ದೇಶದ ಅಭಿವೃದ್ಧಿಯಲ್ಲಿ ಗಣಕಯಂತ್ರಗಳು ವಹಿಸುವ ಪಾತ್ರದ ಸಾಧ್ಯತೆಯ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಸಿ.

[Turn over

www.kpscvaa

SECTION C

8. Answer ***ten*** questions, selecting at least three from each of Groups I, II and III *(Answer to each question should be in about 25 words)* : *3×10=30*

GROUP I

(1) What is the longitude for Indian Standard Time ? What are the approximate boundary longitudes for Karnataka ?

(2) What was the approximate per capita income of Karnataka in 1997-98 at current prices ? How does it compare with the national average ?

(3) What are the ratios of Male/Female and Urban/Rural literacy in Karnataka ? What are the major implications of each ?

(4) Name the major wildlife sanctuaries of Karnataka. Of these, which are the ones covered by *Project Tiger* ?

(5) What has been the pattern of rise in the inflation rate during 1998 ? How is the inflation rate determined ?

GROUP II

(6) Name the years in which Article 356 has been imposed in Karnataka. Which are the states involved in this controversy recently ?

(7) How many MPs does Karnataka send to the Lok Sabha ? Of these, what is the party-wise break-up at present ?

(8) Which are the riparian states of the Krishna river ? What is the Almatti Dam controversy about ?

(9) What is Article 370 ? Why did the BJP fail to fulfil its manifesto commitment with regard to this Article ?

(10) Which are the states with two houses of legislature ? What is the number of seats in the Legislative Council of Karnataka ?

www.kpscvaani.com

ವಿಭಾಗ C

8. ಸಮೂಹ I, II ಮತ್ತು III ಗಳಿಂದ ಪ್ರತಿಯೊಂದರಿಂದಲೂ ಕನಿಷ್ಠ ಮೂರು ಪ್ರಶ್ನೆಗಳನ್ನಾದರೂ ಆಯ್ಕೆ ಮಾಡಿ, ಒಟ್ಟು **ಹತ್ತು** ಪ್ರಶ್ನೆಗಳನ್ನು ಉತ್ತರಿಸಿರಿ.

(ಪ್ರತಿ ಉತ್ತರ ಸುಮಾರು 25 ಶಬ್ದಗಳಲ್ಲಿ) *3×10=30*

ಸಮೂಹ I

(1) ಭಾರತೀಯ ಮಾನಕ ವೇಳೆಯ ರೇಖಾಂಶ ಯಾವುದು ? ಕರ್ನಾಟಕದ ಅಂದಾಜು ಗಡಿ ರೇಖಾಂಶಗಳಾವುವು ?

(2) 1997-98 ಸಾಲಿನಲ್ಲಿ, ಪ್ರಸ್ತುತ ಬೆಲೆಗಳ ಆಧಾರದ ಮೇಲೆ ಕರ್ನಾಟಕದ ಅಂದಾಜು ತಲಾ (ಪರ್ ಕ್ಯಾಪಿಟ) ಆದಾಯವೆಷ್ಟು ? ಇದನ್ನು ರಾಷ್ಟ್ರೀಯ ಸರಾಸರಿಗೆ ಹೋಲಿಸಿದಾಗ ಕಂಡುಬರುವ ಅಂಶವೇನು ?

(3) ಕರ್ನಾಟಕದಲ್ಲಿ ಪುರುಷ/ಮಹಿಳೆ ಹಾಗೂ ಪಟ್ಟಣ/ಗ್ರಾಮೀಣ ಅಕ್ಷರತೆಯ ಅನುಪಾತಗಳನ್ನು ತಿಳಿಸಿರಿ. ಈ ಎರಡೂ ಅನುಪಾತಗಳಿಂದ ಯಾವ ನಿರ್ಧಾರಕ್ಕೆ ಬರಬಹುದು ?

(4) ಕರ್ನಾಟಕದ ಮುಖ್ಯ ವನ್ಯಜೀವಿ ಅಭಯಾರಣ್ಯಗಳನ್ನು ಪಟ್ಟಿ ಮಾಡಿರಿ. ಇವುಗಳಲ್ಲಿ ಯಾವ ಅಭಯಾರಣ್ಯಗಳು ಪ್ರಾಜೆಕ್ಟ್ ಟೈಗರ್‌ನ್ನು ಒಳಗೊಂಡಿವೆ ?

(5) 1998 ರಲ್ಲಿ ಹಣದುಬ್ಬರದ ದರದ ಏರಿಕೆಯ ವಿನ್ಯಾಸ ಯಾವ ರೀತಿ ಇತ್ತು ? ಹಣದುಬ್ಬರದ ದರವನ್ನು ಹೇಗೆ ನಿಶ್ಚಯಿಸಲಾಗುವುದು ?

ಸಮೂಹ II

(6) ಕರ್ನಾಟಕದಲ್ಲಿ ಅನುಚ್ಛೇದ 356 ನ್ನು ಯಾವ ವರ್ಷಗಳಲ್ಲಿ ಹೊರಿಸಲಾಗಿದೆ ? ಇತ್ತೀಚೆಗೆ ಈ ವಿಷಯದಲ್ಲಿ ವಿವಾದಕ್ಕೆ ಒಳಪಟ್ಟಿರುವ ರಾಜ್ಯಗಳಾವುವು ?

(7) ಕರ್ನಾಟಕವು ಲೋಕಸಭೆಗೆ ಎಷ್ಟು ಸಂಸತ್ ಸದಸ್ಯರನ್ನು ಕಳುಹಿಸುತ್ತದೆ ? ಪ್ರಸ್ತುತದಲ್ಲಿ ಈ ಸಂಖ್ಯೆಯ ಪಕ್ಷವಾರು ವಿವರ ನೀಡಿರಿ.

(8) ಕೃಷ್ಣಾ ನದಿ ತೀರಕ್ಕೆ ಸಂಬಂಧಿಸಿದ ರಾಜ್ಯಗಳಾವುವು ? ಆಲಮಟ್ಟಿ ಅಣೆಕಟ್ಟಿನ ವಿವಾದವೇನು ?

(9) ಅನುಚ್ಛೇದ 370 ಅಂದರೇನು ? ಈ ಅನುಚ್ಛೇದಕ್ಕೆ ಸಂಬಂಧಿಸಿದಂತೆ ಭಾ.ಜ.ಪ. ವು ಏಕೆ ತನ್ನ ಚುನಾವಣಾ ಘೋಷಣೆಯ ವಚನಬದ್ಧತೆಯನ್ನು ನೆರವೇರಿಸಲು ವಿಫಲವಾಯಿತು ?

(10) ಶಾಸನಸಭೆಗೆ ಎರಡು ಸದನಗಳಿರುವ ರಾಜ್ಯಗಳಾವುವು ? ಕರ್ನಾಟಕದ ವಿಧಾನ ಪರಿಷತ್‌ನಲ್ಲಿ ಎಷ್ಟು ಸ್ಥಾನಗಳಿವೆ ?

/ Turn over

www.kpscvaani.com

GROUP III

Write notes on :

(11) ISRO Satellite Centre

(12) India's Missile Programme

(13) *Dakshin Gangotri* and *Maitri*

(14) LASER

(15) Cryogenic Engines

www.kpscvaani.com

ಸಮೂಹ III

ಇವುಗಳನ್ನು ಕುರಿತು ಟಿಪ್ಪಣಿ ಬರೆಯಿರಿ :

(11) ಇಸ್ರೋ ಉಪಗ್ರಹ ಕೇಂದ್ರ

(12) ಭಾರತದ ಕ್ಷಿಪಣಿ ಕಾರ್ಯಕ್ರಮ

(13) ದಕ್ಷಿಣ ಗಂಗೋತ್ರಿ ಹಾಗೂ ಮೈತ್ರಿ

(14) ಲೇಸರ್

(15) ಕ್ರಯೊಜೆನಿಕ್ ಇಂಜಿನ್‌ಗಳು

www.kpscvaani.com